**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**3680/2023**

ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-2

| | | |
|---|---|---|
| ಹೆಸರು | ಃ | ನರೇಂದ್ರಕುಮಾರ |
| ತಂದೆಃಗಂಡ | ಃ | ಮೇಘಾರಾಮ |
| ವಯಸ್ಸು | ಃ | 29 ವರ್ಷ |
| ಉದ್ಯೋಗ | : | ವಿದ್ಯಾರ್ಥಿ ಸಿಯುಕೆ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ05.02.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 3, 5 ರಿಂದ 7 ಪರಿಚಯ ಇರುತ್ತಾರೆ. ದಿ.10.04.2022 ರಂದು ಬೆಳಗ್ಗೆ 9.30 ಗಂಟೆಗೆ ನಾನು ಮತ್ತು ಚಾಸಾ-1, 6, 7,5 ರವರೊಂದಿಗೆ ನಮ್ಮ ಯುನಿವರ್ಸಿಟಿಯಲ್ಲಿರುವ ಲಕ್ಷ್ಮಿ ಗುಡಿಗೆ ರಾಮನವಮಿ ಅಚರಣೆ ಮಾಡಲು ಹೋಗಿರುತ್ತೇವೆ. ನಾವು ರಾಮನವಮಿ ಪೂಜೆ ಮಾಡುವಾಗ ಅಲ್ಲಿಗೆ 3-4 ಜನ ರಾಹುಲ ಹತೋಟಾ, ರಾಹುಲ ಆರ್ಯ, ಸಾದಿಕ ಮಹಮ್ಮದ ಹಾಗು ಪ್ರಥ್ವಿ ಅಲ್ಲಿಗೆ ಬಂದು ರಾಹುಲ ಆರ್ಯಾ ಬಂದು ಚಾಸಾ-1 ರವರಿಗೆ ರಾಮನವಮಿ ಯಾಕೆ ಆಚರಿಸುತ್ತಿರಾ ಎಂದು ಕೇಳಿದಾಗ ನಾವು ನಮ್ಮ ಪದ್ದತಿ ಇರುವ ಕಾರಣ ನಾವು ಪೂಜೆ ಮಾಡಿ ಆಚರಣೆ ಮಾಡುತ್ತೇವೆ ಎಂದು ಹೇಳಿದಾಗ ನಮಗೆ ಬೈಯಲು ಪ್ರಾರಂಭಿಸಿ ಕೈಯಿಂದ ಹಾಗೂ ಕಲ್ಲಿನಿಂದ ಚಾಸಾ-1 ರವರಿಗೆ ಹೊಡೆದು ಒಂದು ಚೂಪಾದ ಕಲ್ಲಿನಿಂದ ಎದೆಗೆ ಹೊಡೆದನು ಆಗ ಎದೆಯ ಮೇಲೆ ಗಾಯಗಳು ಆಗಿದ್ದವು ಹಾಗೂ ತಲೆಗೂ ಹೊಡೆದನು. ನಾನು ನಿಲ್ಲಿಸಲು ಹೋದಾಗ ನನಗೂ ತಲೆಗೆ ಹೊಡೆದನು. ಇದರಿಂದ ನನಗೆ ತಲೆಯಲ್ಲಿ ಗಾಯಗಳು ಆಗಿದ್ದವು. ಚಾಸಡಾ-5 ರಿಂದ 7 ರವರು ಬಂದು ಬಿಡಿಸಿರುತ್ತಾರೆ. ನಾವು ಯುನಿವರ್ಸಿಟಿ ಸೆಕ್ಯೂರಿಟಿ ಅಧಿಕಾರಿಗೆ ಕರೆ ಮಾಡಿ ತಿಳಿಸಿ ಅವರು ನಮ್ಮನ್ನು ಅಸ್ಪತ್ರೆಗೆ ಕಳುಹಿಸಿದರು. ನಾವು ನಂತರ ಪ್ರಕರಣವನ್ನು ದಾಖಲಿಸುತ್ತೇವೆ.

ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಒಂದು ಹಿಡಿಗಾತ್ರದ ಕಲ್ಲನ್ನು ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

(ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದುಡಲಾಯಿತು)

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು,
ಆಳಂದ